"ಇವರಿಬ್ಬರಲ್ಲಿ ಯಾರು ನಿಜ ಹೇಳ್ತಾ ಇದ್ದಾರೆ ಅಂತ ನಿನಗೆ ಅನಿಸುತ್ತೆ ಸುರೇಶ್?"

ಅರ್ಥವಾಗದವನಂತೆ ನೋಡಿದ ಸುರೇಶ.

"ಇಬ್ಬರೂ ಮತ್ತೊಬ್ಬರನ್ನು ಬಚಾವ್ ಮಾಡಲು ಕೊಲೆ ತಮ್ಮ ಮೇಲೆ ಹಾಕಿಕೊಳ್ಳುತ್ತಿದ್ದಾರಾ ಸಾರ್?"

"ಇಲ್ಲ, ಇಬ್ಬರೂ ತಮ್ಮ ಮಗಳನ್ನು ಕೊಲೆ ಅಪರಾಧದಿಂದ ಸೇವ್ ಮಾಡಲು ಈ ನಾಟಕ ಮಾಡುತ್ತಿದ್ದಾರೆ."

ರಾಜೇಶ್ ಮತ್ತು ನವಮಿ ತಾವು ನಿಂತ ಜಾಗದಲ್ಲಿಯೇ ಕುಸಿದರು.

ಅವರಿಬ್ಬರೂ ಕಟ್ಟಿದ್ದ ಸುಳ್ಳಿನ ಸೌಧ ಉರುಳಿ ಬಿದ್ದಿತ್ತು. ಅವರ ಮುಖವಾಡಗಳು ಕಳಚಿದ್ದವು.

"ಸರ್ ನನ್ನ ಮಗಳಿಗೆ ಇನ್ನೂ ಹದಿನಾಲ್ಕು ವರ್ಷ... ಇನ್ನೂ ಏನೂ ಅರಿಯದವಳು. ಅವಳ ಮೇಲೆ ಕೇಸ್ ಹಾಕಿ ಜೈಲಿಗೆ ಕಳುಹಿಸಿದರೆ ಅವಳ ಮುಂದಿನ ಇಡೀ ಜೀವನ ಹಾಳಾಗುತ್ತದೆ. ನಿಮಗೆ ಬೇಕಿರುವುದು ಅಪರಾಧಿ ತಾನೇ... ನಾವಿಬ್ಬರೂ ಒಂದು ರೀತಿ ಅಪರಾಧಿಗಳೇ ಅಲ್ಲವಾ... ನಮ್ಮಲ್ಲಿ ಯಾರನ್ನಾದರೂ ಅರೆಸ್ಟ್ ಮಾಡಿ."

ನವಮಿ ನೀರು ತುಂಬಿದ ಕಣ್ಣುಗಳಿಂದ ನಾಗೇಶನ ಕಡೆಗೆ ಕೈ ಮುಗಿಯುತ್ತಾ ಕೇಳಿದಳು.

"ನಮಗೆ ಬೇಕಾಗಿರುವದು ಸತ್ಯ!"

"ನಾನು ಹೇಳುತ್ತೇನೆ ಸರ್." ರಾಜೇಶ್ ನವಮಿಯ ಕಡೆ ನೋಡುತ್ತಾ ನುಡಿದ.

"ನಮ್ಮ ಮಗಳಿಗೆ ಅದು ಹೇಗೋ ನಟಿಯಾಗಬೇಕೆಂಬ ಆಸೆ ಹುಟ್ಟಿತ್ತು. ನವಮಿಯ ಮೊಬೈಲ್‌ನಲ್ಲಿದ್ದ ಚೇತನ್‌ಕುಮಾರ್ ನಂಬರ್ ತೆಗೆದುಕೊಂಡು, ತಾನೇ ಕಾಂಟ್ಯಾಕ್ಟ್ ಮಾಡಿ ಭೇಟಿಯಾಗಿದ್ದಳು. ವಿಷಯ ತಿಳಿದ ನವಮಿ ಅವಳಿಗೆ ಬೈದಾಗ, ನವಮಿಯ ಡಾಕ್ಯುಮೆಂಟ್ ನೀಡಿ ಹೊಸದೊಂದು ಮೊಬೈಲ್ ನಂಬರ್ ತೆಗೆದುಕೊಂಡು ಮತ್ತೆ ಅವನೊಂದಿಗೆ ಕಾಂಟ್ಯಾಕ್ಟ್ ಮುಂದುವರೆಸಿದ್ದಳು. ಕೊಲೆಯಾದ ದಿನ 'ಸಾಯಂಕಾಲ ಸಿಗುತ್ತೇನೆ' ಮತ್ತು ಅದಕ್ಕೆ ಬಂದ ರಿಪ್ಲೈ ಕಂಡ ನವಮಿ, ನನಗೆ ತಿಳಿಸಿ, ಹೇಗಾದರೂ ಚೇತನ್‌ನಿಂದ ದೂರ ಇಡು ಅಂತ ಹೇಳಿದಳು. ಅವರಿಬ್ಬರನ್ನೂ ಆಫೀಸಿನಲ್ಲಿಯೇ ಹಿಡಿಯಬೇಕು ಅಂತ ಹೋಗಿದ್ದೆ. ಅಷ್ಟರಲ್ಲಿ ಅವನು ಸತ್ತು ಬಿದ್ದಿದ್ದ. ಮಗಳ ಮೇಲೆ ಕೈ ಹಾಕಲು ಬಂದಾಗ ಅವಳು ಚೇತನ್‌ನನ್ನು ಸಾಯಿಸಿದ್ದಳು. ಅವಳೂ ಕೂಡಾ ಅಲ್ಲಲ್ಲಿ ಗಾಯಗೊಂಡಿದ್ದು, ವಿಪರೀತ ಹೆದರಿದ್ದಳು. ನವಮಿಗೆ ವಿಷಯ ತಿಳಿಸಿ, ಹೇಗಾದರೂ ಮಾಡಿ ಮಗಳನ್ನು ಈ ಕೊಲೆಯ ಆಪಾದನೆಯಿಂದ ಬಚಾವ್ ಮಾಡಬೇಕೆಂದು ನಿರ್ಧರಿಸಿದೆ. ನವಮಿ ತಾನೇ ಹರಕೆಯ ಕುರಿಯಾಗಲು ನಿರ್ಧರಿಸಿದಳು. ನಾನು, ಚೇತನ್ ಮೊಬೈಲ್‌ನಲ್ಲಿ ಮಗಳ ಹೆಸರನ್ನು ಎಡಿಟ್ ಮಾಡಿ, ನವಮಿಯ ಹೆಸರು ಹಾಕಿ, ಅಲ್ಲಿ ಬಿದ್ದ ಬೇರೆ ರಕ್ತದ ಕಲೆಗಳನ್ನೆಲ್ಲಾ ಒರೆಸಿ, ಲ್ಯಾಪ್‌ಟಾಪ್ ಅಲ್ಲಿಂದ ತೆಗೆದುಕೊಂಡೆ. ಉದ್ದೇಶ, ನಿಮ್ಮನ್ನು ಬ್ಲಾಕ್‌ಮೇಲ್ ಕೇಸ್ ಅಂತ ಮಿಸ್ ಲೀಡ್ ಮಾಡುವುದಾಗಿತ್ತು. ನೀವು ಅಲ್ಲಿಗೆ ಬರುವತನಕ ಇದ್ದು, ನಂತರ ಅಲ್ಲಿಂದ ಹೊರಟೆವು. ನೀವು ಸಿಸಿಟೀವಿಯಲ್ಲಿ, ನವಮಿಯನ್ನು ಸುಮಾರು ಐದರಿಂದ ಆರು ಗಂಟೆಯ ತನಕ ಹುಡುಕಿದಿರಿ. ನಾವು ಆರರ ಮೇಲೆ ಅಲ್ಲಿಂದ ಹೊರಟೆವು. ಹಾಗಾಗಿ ನಾವು ನಿಮಗೆ ಕಾಣಲಿಲ್ಲ."

"ನನ್ನ ಮಗಳು ತನ್ನ ಮೇಲೆ ಆ ಮೃಗ ದಾಳಿ ಮಾಡಿದಾಗ ಅವನನ್ನು ಕೊಂದಿದ್ದಾಳೆ. ಅದು ಅವಳ ಆತ್ಮರಕ್ಷಣೆಗಾಗಿ ಮಾಡಿದ್ದು, ಆವೇಶದಿಂದ ಮಾಡಿದ್ದು, ಉದ್ದೇಶಪೂರ್ವಕವಾಗಿ ಅಲ್ಲ. ಅವಳ ದೇಹಕ್ಕಾದ ಗಾಯ ಇನ್ನೂ ಮಾಸಿಲ್ಲ... ಮನಸ್ಸಿಗೆ ಆದ ಗಾಯ ಮಾಯಲು ಸಮಯ ಬೇಕು ಸರ್... ಇದೇ ಸತ್ಯ. ಇಷ್ಟೇ ಸತ್ಯ. ಅವಳನ್ನು ಬಿಟ್ಟುಬಿಡಿ ಸರ್, ನನ್ನನ್ನೇ ಅರೆಸ್ಟ್ ಮಾಡಿ."

ನಾಗೇಶ್ ನಿಟ್ಟುಸಿರು ಬಿಟ್ಟ. ರಾಜೇಶ್ ಹೇಳಿದ ವ್ಯಾಖ್ಯಾನ ಅವನ ಥಿಯರಿಗೆ ಹೊಂದಿಕೊಂಡಿತ್ತು.